ರಾಜ್ಯದಲ್ಲಿರುವ ನದಿಗಳ ಶುದ್ಧೀಕರಣ

374(614); ಶ್ರೀ ಕೆ.ಗೋಪಾಲಯ್ಯ (ಮಹಾಲಕ್ಷ್ಮಿ ಲೇಜಾಟ್)

1) ರಾಜ್ಯದಲ್ಲಿ ಹರಿಯುವ ಪ್ರಮುಖ ನದಿಗಳಾವುವು;

2) ಈ ಪ್ರಮುಖ ನದಿಗಳ ನೀರು ಹಲವಾರು ಜಾಗಗಳಲ್ಲಿ ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

3) ಈ ನದಿಗಳನ್ನು ಶುದ್ಧೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಬಿ. ಪಾಟೀಲ್(ಜಲ ಸಂಪನ್ಮೂಲ ಸಚಿವರು) (ಭಾರಿ ಮತ್ತು ಮಧ್ಯಮ ನೀರಾವರಿ)

1) ರಾಜ್ಯದಲ್ಲಿ ಹರಿಯುವ ಪ್ರಮುಖ ನದಿಗಳ ವಿವರ ಈ ಕೆಳಗಿನಂತಿದೆ: ಕೃಷ್ಣಾ, ಘಟಪ್ರಭಾ, ಮಲಪ್ರಭಾ, ತುಂಗಾ, ಭದ್ರಾ, ವರದಾ, ಕುಮುದ್ವತಿ, ತುಂಗಭದ್ರಾ, ಭೀಮಾ, ಕಾರಂಜಾ, ನೇತ್ರಾವತಿ, ಕಾಳಿ, ವರಾಹಿ, ಸೌಪರ್ಣಿಕಾ, ಶರಾವತಿ, ಸೀತಾ, ಕಾವೇರಿ, ಕಬಿನಿ, ಹಾರಂಗಿ, ಹೇಮಾವತಿ, ಲಕ್ಷ್ಮಣತೀರ್ಥ, ಶಿಂಷಾ, ಸುವರ್ಣಾವತಿ, ಅರ್ಕಾವತಿ.

2) ತುಂಗಭದ್ರಾ ನದಿಗೆ ತುಂಗಭದ್ರಾ ಜಲಾಶಯದ ಮೇಲ್ಭಾಗದಲ್ಲಿರುವ ಶಿವಮೊಗ್ಗ, ದಾವಣಗೆರೆ, ಹಾವೇರಿ, ಗದಗ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಿಂದ ಬರುವ ಶುದ್ಧೀಕರಿಸದಿರುವ ತ್ಯಾಜ್ಯನೀರು (ಉದಾಹರಣೆ ಮೆ॥ ಹರಿಹರ ಫಾಲಿಪೈಬರ್ಸ್, ಹಾವೇರಿ ಜಿಲ್ಲೆ, ಮೆ॥ ಮೈನಾ ಪೇವಿಯರಸ್ ಲಿಮಿಟೆಡ್, ಶಿವಮೊಗ್ಗ ಜಿಲ್ಲೆ, ಇತ್ಯಾದಿ) ಮತ್ತು ಸದರಿ ಜಿಲ್ಲೆಗಳ ನದಿ ದಡದಲ್ಲಿರುವ ನಗರ/ಪಟ್ಟಣ/ಗ್ರಾಮಗಳ ಗೃಹ ತ್ಯಾಜ್ಯವು ನದಿಯನ್ನು ಸೇರುತ್ತಿದೆಯೆಂದು ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಛೇರಿ, ಕೊಪ್ಪಳ ಇವರು ತಮ್ಮ ಜೂನ್ 2011ರ ವರದಿಯಲ್ಲಿ ತಿಳಿಸಿರುತ್ತಾರೆ.

ಲಕ್ಷ್ಮಣತೀರ್ಥ ನದಿಯು ಹುಣಸೂರು ಪಟ್ಟಣದ ಬಳಿ ತ್ಯಾಜ್ಯ ವಸ್ತು ಮತ್ತು ಚರಂಡಿ ನೀರು ಸೇರಿ ಕಲುಷಿತಗೊಂಡಿರುವುದು ಮತ್ತು ಅರ್ಕಾವತಿ ನದಿಯ ಉಪನದಿಯಾದ ವೃಷಭಾವತಿ ನದಿಗೆ ಬೆಂಗಳೂರು ನಗರದ ಒಳಚರಂಡಿ ನೀರು ಸೇರ್ಪಡೆಯಾಗಿ ಕಲುಷಿತಗೊಂಡಿರುತ್ತದೆ.

3) ರಾಷ್ಟ್ರೀಯ ಜಲ ಕಾರ್ಯ ನೀತಿ – 2012 ರ ಅನುಷ್ಠಾನ ಕಾರ್ಯ ಯೋಜನೆಯಲ್ಲಿ ತುಂಗಾಭದ್ರಾ ನದಿ ಸಂರಕ್ಷಣೆ ಮತ್ತು ನಿರ್ವಹಣೆಯ ಪಾತ್ರದ ಕುರಿತು ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಪ್ರಕ್ರಿಯೆ ಜಾರಿಯಲ್ಲಿದೆ.

ಅರ್ಕಾವತಿ ನದಿಯ ಸರ್ವತೋಮುಖ ಪುನಶ್ಚೇತನ ಯೋಜನಾ ವರದಿ ತಯಾರಿಸಲು ಸಮಾಲೋಚಕರನ್ನು ನೇಮಿಸುವ ಸಲುವಾಗಿ ಆರ್‌ಎಫ್‌ಪಿ ದಸ್ತಾವೇಜಿನ ಅಡಿಯಲ್ಲಿ ಅರ್ಕಾವತಿ ನದಿಗೆ ಹಾಗೂ ಅದರ ಉಪನದಿಗಳಿಗೆ ಯಾವುದಾದರೂ ಅನ್ಯ ಮೂಲಗಳಿಂದ ಪ್ರವೇಶಿಸಲ್ಪಡುವ ಕಲುಷಿತ ನೀರು, ಕೈಗಾರಿಕಾ ತ್ಯಾಜ್ಯ ಹಾಗೂ ಅದರಿಂದ ಉಂಟಾಗುವ ಮಾಲಿನ್ಯ ಕಲ್ಮಶಾಂಶಗಳ ಮಟ್ಟವನ್ನು ಅಧ್ಯಯಿಸಿ, ಸದರಿ ತ್ಯಾಜ್ಯ ವಸ್ತುಗಳನ್ನು ಪರಿಷ್ಕರಣೆಗೆ ಒಳಪಡಿಸಿ ನದಿ ನೀರನ್ನು ಸಾಮಾನ್ಯ ಗುಣಮಟ್ಟಕ್ಕೆ ತರುವ ಬಗ್ಗೆ ಅಧ್ಯಯನ ನಡೆಸುವ ಅಂಶವನ್ನು ಅಳವಡಿಸಲಾಗಿದೆ.